**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.**

**ಸಿ.ಸಿ.ನಂಬರ. 18/2023.**

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : ನಿತೀನ್ ತಂದೆ ಮೋಹನ್ ಬಿಡಿಕರ್,
ವಯಸ್ಸು : 38 ವರ್ಷ, ವೃತ್ತಿ : ಕೂಲಿ ಕೆಲಸ,
ಸಾ : ದುರ್ಗಾನಗರ, ಹಳಿಯಾಳ.

## ದೋಷಾರೋಪಣೆ

ನಾನು ಗೀತಾ., ಪ್ರ.ದ.ನ್ಯಾದಂ ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷರೋಪಣೆ ಏನೆಂದರೆ.

ದಿನಾಂಕ 09-12-2022 ರಂದು ಬೆಳಗ್ಗೆ 11-00 ಗಂಟೆಗೆ ಹಳಿಯಾಳ ಪೊಲೀಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ಶಹರದ ದುರ್ಗನಗರದಲ್ಲಿರುವ ಪಿರ್ಯಾದಿಯ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿಯಾದ ನೀವು ಸರಾಯಿ ಕುಡಿಯಲು ಹಣ ಕೇಳಿದ್ದಕ್ಕೆ ಪಿರ್ಯಾದಿ ಹಣ ಇಲ್ಲ ಅಂತಾ ಹೇಳಿದ್ದರಿಂದ ಪಿರ್ಯಾದಿಯನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಅವರನ್ನು ನಿಂದಿಸಿ ಅವರ ಶಾಂತಿಗೆ ಭಂಗ ಉಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ.504 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ, ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಗೆ ಕೈಯಿಂದ ಮೈಮೇಲೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ.323 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಮೂರನೇಯದಾಗಿ, ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಚಾಸಾ 4 ರವರಿಗೆ ಕಟ್ಟಿಗೆಯ ರೀಪನಿಂದ ಎಡಗಡೆಯ ತೋಳಿಗೆ ಮತ್ತು ಬೆನ್ನಿಗೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ.324 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ, ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಯನ್ನು ಮತ್ತು ಚಾಸಾ 4 ರವರನ್ನು ಉದ್ದೇಶಿಸಿ ಜೀವ ಬೇದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ.506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸ್ದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

(ಆರೋಪಿತನಿಗೆ ದೋಷಾರೋಪಣೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ : ಹಳಿಯಾಳ.
ದಿನಾಂಕ : 13-01-2026.

ಪ್ರ.ದ.ನ್ಯಾದಂ., ಹಳಿಯಾಳ.